**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹದಿನೈದನೇ ಅಧಿವೇಶನ**

# ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-38)**

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ನ್ನು (1987ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(3) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 36ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ 34) 36ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ "ಭೂ ಆರ್ಜನಾ ಅಧಿನಿಯಮ, 1894ರ" ಎಂಬ ಪದಗಳು, ಅಲ್ಪವಿರಾಮ ಚಿಹ್ನೆ ಮತ್ತು ಅಂಕಿಗಳಿಗೆ "ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ" ಎಂಬ ಪದಗಳನ್ನು, ಅಲ್ಪವಿರಾಮ ಚಿಹ್ನೆ ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ "ಭೂ ಆರ್ಜನಾ ಅಧಿನಿಯಮ, 1894ರ 50ನೇ ಪ್ರಕರಣದ (2)ನೇ ಉಪ ಪ್ರಕರಣದ" ಎಂಬ ಪದಗಳು, ಅಲ್ಪವಿರಾಮ ಚಿಹ್ನೆ, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ 95ನೇ ಪ್ರಕರಣದ (2)ನೇ ಉಪ ಪ್ರಕರಣದ" ಎಂಬ ಪದಗಳು, ಅಲ್ಪವಿರಾಮ ಚಿಹ್ನೆ, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

(iii) (3)ನೇ ಉಪಪ್ರಕರಣದಲ್ಲಿ "ಭೂ ಆರ್ಜನಾ ಅಧಿನಿಯಮ, 1894ರ 16ನೇ ಪ್ರಕರಣದ" ಎಂಬ ಪದಗಳು, ಅಲ್ಪವಿರಾಮ ಚಿಹ್ನೆ ಮತ್ತು ಅಂಕಿಗಳಿಗೆ "ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ 23ನೇ ಪ್ರಕರಣದ" ಎಂಬ ಪದಗಳು, ಅಲ್ಪವಿರಾಮ ಚಿಹ್ನೆ ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಭೂ ಆರ್ಜನಾ ಅಧಿನಿಯಮ, 1894ನ್ನು ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 30) ಮೂಲಕ ನಿರಸನಗೊಳಿಸಲಾಗಿದೆ. ಆದ್ದರಿಂದ ಭೂ ಆರ್ಜನೆ, ಭೂಮಿಯ ಸ್ವಾಧೀನತೆಯನ್ನು ಆರ್ಜಿಸುವ ಮತ್ತು ಪರಿಹಾರವನ್ನು ನೀಡುವ ಉದ್ದೇಶಕ್ಕಾಗಿ ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 30) ಉಪಬಂಧಗಳನ್ನು ಸೇರಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ನ್ನು (1987ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಆರ್. ರೋಷನ್ ಬೇಗ್**
ನಗರಾಭಿವೃದ್ಧಿ ಮತ್ತು ಹಜ್ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

# ಅನುಬಂಧ

## ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ

**XX XX XX**

**36. ಒಪ್ಪಂದದ ಮೂಲಕವಲ್ಲದೆ ಅನ್ಯಥಾ ಭೂ ಆರ್ಜನೆಗೆ ಅನ್ವಯಿಸುವ ಉಪಬಂಧಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಒಪ್ಪಂದದ ಮೂಲಕವಲ್ಲದೆ ಅನ್ಯಥಾ ನಗರ ಪ್ರದೇಶದೊಳಗಿರುವ ಅಥವಾ ಅದರ ಹೊರಗಿರುವ ಭೂಮಿಯ ಆರ್ಜನೆಯನ್ನು ಭೂ ಆರ್ಜನಾ ಅಧಿನಿಯಮ, 1894ರ ಉಪಬಂಧಗಳ ಮೂಲಕ ಅವು ಅನ್ವಯವಾಗುವಮಟ್ಟಿಗೆ ನಿಯಂತ್ರಿಸತಕ್ಕದ್ದು.

(2) ಭೂ ಆರ್ಜನಾ ಅಧಿನಿಯಮ, 1894ರ 50ನೇ ಪ್ರಕರಣದ (2)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ, ಪ್ರಾಧಿಕಾರವನ್ನು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವೆಂದು ಭಾವಿಸತಕ್ಕದ್ದು.

(3) ಭೂ ಆರ್ಜನಾ ಅಧಿನಿಯಮ, 1894ರ 16ನೇ ಪ್ರಕರಣದ ಅಡಿಯಲ್ಲಿ ಭೂಮಿಯು ಸರ್ಕಾರದಲ್ಲಿ ನಿಹಿತವಾದ ತರುವಾಯ, ಡೆಪ್ಯುಟಿ ಕಮಿಷನರು, ಆರ್ಜನೆಯ ವೆಚ್ಚವನ್ನು ಸಂದಾಯ ಮಾಡಿದ ಅನಂತರ ಮತ್ತು ಆರ್ಜನೆಯ ಕಾರಣದಿಂದ ಭರಿಸಬಹುದಾದ ಯಾವುವೇ ಹೆಚ್ಚಿನ ವೆಚ್ಚಗಳನ್ನು ಸಂದಾಯ ಮಾಡಲು ಪ್ರಾಧಿಕಾರವು ಒಪ್ಪಿಕೊಂಡ ಅನಂತರ, ಭೂಮಿಯನ್ನು ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು ಮತ್ತು ತದನಂತರ ಭೂಮಿಯು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ 627, -ಪ್ರತಿಗಳು 1000, 7ನೇ ನವೆಂಬರ್ 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**FIFTEENTH SESSION**

# THE KARNATAKA URBAN DEVELOPMENT AUTHORITIES (AMENDMENT) BILL, 2017

**(L.A. Bill No. 38 of 2017)**

A Bill further to amend the Karnataka Urban Development Authorities Act, 1987.

Whereas it is expedient further to amend the Karnataka Urban Development Authorities Act, 1987 (Karnataka Act 34 of 1987), for the purposes hereinafter appearing;

Be it enacted by the Karnataka State Legislature in the sixty eighth year of the Republic of India, as follows:-

**1. Short title and commencement.-** (1) This Act may be called the Karnataka Urban Development Authorities (Amendment) Act, 2017

(2) It shall come into force at once.

**2. Amendment of section 36.-** In the Karnataka Urban Development Authorities Act, 1987 (Karnataka Act 34 of 1937), in section 36,-

(i) in sub-section (1), for the words and figures "of the Land Acquisition Act, 1894" the words and figures "of the Right to Fair Compensation and Transparency in Land Acquisition, Rehabilitation and Resettlement Act, 2013" shall be substituted;

(ii) in sub-section (2), for the words, brackets and figures "sub-section (2) of section 50 of the Land Acquisition Act, 1894", the words, brackets and figures, "sub-section (2) of section 95 of the Right to Fair Compensation and Transparency in Land Acquisition, Rehabilitation and Resettlement Act, 2013" shall be substituted; and

(iii) in sub-section (3), for the words and figures "section 16 of the Land Acquisition Act, 1894", the words and figures, "section 23 of the Right to Fair Compensation and Transparency in Land Acquisition, Rehabilitation and Resettlement Act, 2013" shall be substituted.

## STATEMENT OF OBJECTS AND REASONS

The Land Acquisition Act, 1894 was repealed by the Right to Fair Compensation and Transparency in Land Acquisition, Rehabilitation and Resettlement Act, 2013 (Central Act 30 of 2013). Therefore it is considered necessary to amend the Karnataka Urban Development Authorities Act, 1987 (Karnataka Act 34 of 1987) to incorporate the provisions of the Right to Fair Compensation and Transparency in Land Acquisition, Rehabilitation and Resettlement Act, 2013 (Central Act 30 of 2013) for the purpose of land acquisition, acquiring possession of the land and award of compensation.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**R. ROSHAN BAIG**
Minister for Urban Development
and Haj

**S. Murthy**
Secretary (I/c)
Karnataka Legislative Assembly

## ANNEXURE

## EXTRACT FROM THE KARNATAKA URBAN DEVELOPMENT AUTHORITIES ACT, 1987 (KARNATAKA ACT 34 OF 1987)

**XX** **XX** **XX**

**36. Provisions applicable to the acquisition of land other-wise than by agreement.-** (1) The Acquisition of land under this Act otherwise than by agreement within or without the urban area shall be regulated by the provisions, so far as they are applicable, of the Land Acquisition Act, 1894.

(2) For the purpose of sub-section (2) of section 50 of the Land Acquisition Act, 1894, the Authority shall be deemed to be the local authority concerned.

(3) After the land vests in the Government under section 16 of the Land Acquisition Act, 1894, the Deputy Commissioner shall, upon payment of the cost of the acquisition, and upon the Authority agreeing to pay any further cost which may be incurred on account of the acquisition, transfer the land to the Authority, and the land shall thereupon vest in the Authority.

**XX** **XX** **XX**

Government Press, Vikasa Soudha Unit, Bengaluru 20th June, 2017 P7, W.D.627, Copies 1000